331. ಡಾ ಡಿ. ಅದಿಶೇಷಪ್ಪ ಶೆಟ್ಟಿ ವೈದ್ಯಾಧಿಕಾರಿ
ಸರ್ಕಾರಿ ಆಯುರ್ವೇದ ಔಷಧಾಲಯ
ಬಲಕುಂದಿ 583 103 ತಾ॥ ಶಿರಗುಪ್ಪ
ಬಳ್ಳಾರಿ ಜಿಲ್ಲೆ

332. ಡಾ. ಜಿ.ಎಸ್. ಸರಳಾ ವೈದ್ಯಾಧಿಕಾರಿ
ಸರ್ಕಾರಿ ಆಯುರ್ವೇದ ಆಸ್ಪತ್ರೆ
ತಾಳೂರು 583 103 ತಾ॥ ಶಿರಗುಪ್ಪ
ಬಳ್ಳಾರಿ ಜಿಲ್ಲೆ

333. ಡಾ. ಮೃತ್ಯುಂಜಯಸ್ವಾಮಿ ಟಿ. ವೈದ್ಯಾಧಿಕಾರಿ
ಸರ್ಕಾರಿ ಆಯುರ್ವೇದ ಆಸ್ಪತ್ರೆ
ಸಧ್ವಿ 583 122 ತಾ॥ ಶಿರಗುಪ್ಪ
ಬಳ್ಳಾರಿ ಜಿಲ್ಲೆ.

ಗ್ರಾನೈಟ್ ವ್ಯವಹಾರದಲ್ಲಿ ಶಾಸಕರ ಮತ್ತು ಮಂತ್ರಿಗಳ ಸಂಬಂಧ

2400 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂತ್ರಿಗಳು ಮತ್ತು ಶಾಸಕರು ಅಥವಾ ಅವರ ಸಂಬಂದಿಗಳು ಗ್ರಾನೈಟ್ ಗುತ್ತಿಗೆ ವ್ಯವಹಾರ ಮಾಡುತ್ತಿದ್ದಾರೆಯೇ?

ಆ) ಹಾಗಿದ್ದಲ್ಲಿ ಅವರ ಹೆಸರು ಹಾಗೂ ವಿವರಗಳನ್ನೊದಗಿಸಲಾಗುವುದೆ

ಶ್ರೀ ಎಂ.ಎಲ್.ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು)

ಅ) ಮಾಹಿತಿ ಲಭ್ಯವಿರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಕಿಂಕೋ ಕಾರ್ಖಾನೆಯ ಪುನಶ್ಚೇತನದ ಬಗ್ಗೆ

2535 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನದ ಕಿಂಕೋ ಕಾರ್ಖಾನೆಯು ತುಂಬಾ ನಷ್ಟದಲ್ಲಿ ನಡೆಯುತ್ತಿದ್ದು ಇದನ್ನು ಮುಚ್ಚುವ ಸ್ಥಿತಿಗೆ ಬಂದಿರುವ ವಿಚಾರವು ನಿಜವೇ.

ಆ) ಈ ಕಾರ್ಖಾನೆಯು ಮಲೆನಾಡು ಪ್ರದೇಶದಲ್ಲಿ ಇರುವ ಏಕೈಕ ಸರ್ಕಾರಿ ಸ್ವಾಮ್ಯದ ಕಾರ್ಖಾನೆಯಾಗಿದ್ದು ಈ ಕಾರ್ಖಾನೆಯನ್ನು ಮುಚ್ಚುವುದರಿಂದ ನೂರಾರು ಕಾರ್ಮಿಕರಿಗೆ ತೊಂದರೆ ಆಗುವ ಸಂಗತಿಯು ಸರ್ಕಾರದ ಗಮನಕ್ಕೆ ಬಂದಿಲ್ಲವೆ

ಇ) ಈ ಕಾರ್ಖಾನೆಯನ್ನು ಪುನಶ್ಚೇತನ ಗೊಳಿಸಲು ಸರ್ಕಾರ ಕ್ರಮವನ್ನೇನಾದರೂ ಕೈಗೊಂಡಿದೆಯೇ?

ಶ್ರೀಮತಿ ಮನೋರಮ ಮಾಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಯ ಸಚಿವರು)

ಅ) ಹೌದು

ಆ) ಹೌದು

ಇ) ಸರ್ಕಾರವು ಕಿಂಕೋ ಸಂಸ್ಥೆಯನ್ನು ಸದಾ ಕಾರ್ಯದಲ್ಲಿ ತೊಡಗುವಂತೆ ಮಾಡಲು ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ ಹಾಗೂ ಈ ಕಂಪನಿಯು ಕೆಲಸದ ಫಲಿತಾಂಶ ವೃದ್ಧಿಯಾಗಲು ಇವರಿಗೆ ಸಾಕಷ್ಟು ವಾಹನ ಕವಚ ಕಟ್ಟುವ ಕೆಲಸವನ್ನು ನೀಡುವಂತೆ ಕೆ.ಎಸ್.ಆರ್.ಟಿ.ಸಿ.ಯನ್ನು ಸದಾ ಒತ್ತಾಯಿಸುತ್ತಲೇ ಬಂದಿದೆ ಮತ್ತು ಸರ್ಕಾರವು ದುಡಿಯುವ ಬಂಡವಾಳವನ್ನು ಸಹ ನೀಡಿದರು ಆದರೂ ಸಹ ಕಂಪನಿಯು ಕಾರ್ಯದಲ್ಲಿ ಪ್ರಗತಿ ಕಂಡು ಬಂದಿರುವುದಿಲ್ಲ.

ಗ್ರಾನೈಟ್ ವ್ಯವಹಾರದ ಸರ್ಕಾರೀಕರಣ

2397 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾನೈಟ್ ಕಲ್ಲಿನ ವ್ಯವಹಾರವನ್ನು ಖಾಸಗಿಯಾಗಿ ಗುತ್ತಿಗೆ ಕೊಡುವುದರಿಂದ ಸರ್ಕಾರಕ್ಕೆ ವರ್ಷಕ್ಕೆ ಸಾವಿರಾರು ಕೋಟಿ ರೂಪಾಯಿ ಹಾನಿಯಾಗುತ್ತದೆಂಬುದನ್ನು ತಜ್ಞರ ಸಮಿತಿ ರಚನೆ ಮಾಡಿ ಸರ್ಕಾರ ಖಚಿತಪಡಿಸಿಕೊಳ್ಳುವುದೇ?

ಶ್ರೀ ಎಂ ಎಲ್ ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು)

ಅ) ಇಲ್ಲ

ವೈದ್ಯಾಧಿಕಾರಿಗಳ ಬಗ್ಗೆ

2508 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಿಯಮಾವಳಿ ಪ್ರಕಾರ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು?

ಆ) ಶಿಗ್ಗಾಂವ ಸಿ.ಹೆಚ್.ಸಿ. (ಸಮೂದಾಯ ಆರೋಗ್ಯ ಕೇಂದ್ರ) ಕೇಂದ್ರಕ್ಕೆ ಇನ್ನುಳಿದ ವೈದ್ಯಾಧಿಕಾರಿಗಳನ್ನು ಕೂಡಲೇ ನೇಮಿಸಲಾಗುವುದೇ?

ಇ) ಶಿಗಾಂವ ತಾಲ್ಲೂಕು ಬಕಾಪುರ ಪಿ.ಹೆಚ್.ಸಿ ಯನ್ನು 30 ಹಾಸಿಗೆಗಳನ್ನು ಹೊಂದುವಂತೆ ಮೇಲ್ದರ್ಜೆಗೆ ಏರಿಸಲಾಗುವುದೇ?

ಶ್ರೀ ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಮೂವರು ವೈದ್ಯರು ಒಬ್ಬ ದಂತ ವೈದ್ಯರು

ಆ) ಶಿಗ್ಗಾಂದ ಸಮುದಾಯ ಆರೋಗ್ಯಕೇಂದ್ರದಲ್ಲಿ ಈಗಾಗಲೇ ಇಬ್ಬರು ವೈದ್ಯಾಧಿಕಾರಿಗಳಿದ್ದು ಇನ್ನುಳಿದ ವೈದ್ಯರನ್ನು ನೇಮಿಸಲು ಪರಿಶೀಲಿಸಲಾಗುವುದು.

ಇ) ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿಲ್ಲ

ಕಟೀಲು ಆಸ್ಪತ್ರೆ ಕಟ್ಟಡ

2476 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಟೀಲು ಆಸ್ಪತ್ರೆಗೆ ಕಟ್ಟಡದ ಕೊರತೆಯನ್ನು ನೀಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಆ) ಕಟೀಲು ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದವರು ಸದರಿ ಆಸ್ಪತ್ರೆಯ ಕಟ್ಟಡದ ನಿರ್ಮಾಣಕ್ಕೆ ರೂ 5-00 ಲಕ್ಷ ಸಹಾಯಧನ ಕೊಡುವುದು